INDIAN JOURNAL OF HISTORY AND ARCHAEOLOGY
ISSN (e):2582-225Xwww.ijha.in
Vol-7, Issue -3, May--June, 2025
PageNo,49-55
Peer -Reviewed, Refereed Journal

# ಕಡೂರು ತಾಲೂಕಿನ ಜೈನ ಬಸದಿಗಳು–ಒಂದು ಅವಲೋಕನ

ಡಾ.ಸಿ.ಈ.ಲೋಕೇಶ [1].

ಪ್ರಾಚೀನ ಕರ್ನಾಟಕದ ಧಾರ್ಮಿಕ ಚರಿತ್ರೆಯಲ್ಲಿ ಜೈನ ಧರ್ಮದ ಪ್ರಭಾವ ಅತಿ ಮಹತ್ವದ್ದಾಗಿದೆ. ಇದು ಒಂದು ಪ್ರಬಲವಾದ ಧರ್ಮವಾಗಿತ್ತು. ಭಾರತೀಯ ವಾಸ್ತುಶಿಲ್ಪ ಶೈಲಿಗಳಲ್ಲಿ ಜೈನರ ವಾಸ್ತುಶಿಲ್ಪಗಳು ಹಾಸುಹೊಕ್ಕಾಗಿ ಬೆರೆತು ವಿಸ್ತಾರವಾಗಿ ಹಾಗೂ ವೈವಿಧ್ಯಮಯವಾಗಿ ತನ್ನದೇ ಆದ ಒಂದು ಸೈದ್ಧಾಂತಿಕ ನೆಲೆಗಟ್ಟಿನಲ್ಲಿ ಬೆಳೆಯಿತು. ಬೌದ್ಧ ಮತ್ತು ವೈದಿಕ ಮತಗಳ ಜೊತೆ ಜೊತೆಯಾಗಿ ಬೆಳೆದು ಬಂದು ಭಾರತೀಯ ಕಲಾ ವೈಭವಕ್ಕೆ ಮಹತ್ತರವಾದ ಕಾಣಿಕೆಯನ್ನು ನೀಡಿತು. ಬೌದ್ಧ ಮತ್ತು ವೈದಿಕ ವಾಸ್ತುಶಿಲ್ಪ ಶೈಲಿಯನ್ನು ಹೋಲಿಕೆ ಮಾಡಿಕೊಂಡು ಕೆಲವು ವೈಶಿಷ್ಟ್ಯ ಶೈಲಿಗಳನ್ನು ಜೈನ ಸ್ಥಪತಿಗಳು ಹಾಗೂ ಶಿಲ್ಪಿಗಳು ತಮ್ಮ ಸ್ಮಾರಕಗಳಲ್ಲಿ ಅಳವಡಿಸಿಕೊಂಡರು.

ಜೈನ ಧರ್ಮವು ಕರ್ನಾಟಕದ ಸಾಂಸ್ಕೃತಿಕ ಇತಿಹಾಸದಲ್ಲಿ ತನ್ನದೇ ಆದ ಮಹತ್ವದ ಸ್ಥಾನವನ್ನು ಪಡೆದಿದೆ. ದಕ್ಷಿಣ ಭಾರತದಲ್ಲಿ ಜೈನಧರ್ಮವು ಕರ್ನಾಟಕದ ಚರಿತ್ರೆಯೊಂದಿಗೆ ಬೆರೆತು, ತನ್ನದೇ ಆದ ಛಾಪು ಮೂಡಿಸಿರುವುದನ್ನು ಇತಿಹಾಸದ ಪುಟಗಳಿಂದ ತಿಳಿಯಬಹುದು. ಈ ಧರ್ಮವು ಉತ್ತರ ಭಾರತದಲ್ಲಿ ಉಗಮವಾದುದಾದರೂ ಕರ್ನಾಟಕದಲ್ಲಿ ಪ್ರಚಾರಗೊಂಡಂದಿನಿಂದ ಇಲ್ಲಿನ ಸಾಹಿತ್ಯ, ಕಲೆ, ಭಾಷೆ, ವಿದ್ಯಾ ಪ್ರಸಾರ ಮತ್ತು ಸಾಮಾನ್ಯ ಜನರ ಜೀವನ ವಿಧಾನ ಹಾಗೂ ನೈತಿಕ ಮೌಲ್ಯಗಳನ್ನು ರೂಪಿಸುವುದರಲ್ಲಿ ಪ್ರಮುಖ ಪಾತ್ರವಹಿಸಿದೆ.

ಕರ್ನಾಟಕಕ್ಕೆ ಜೈನಧರ್ಮವು ಕ್ರಿ.ಸ್ತ.ಪೂರ್ವದ ಶತಮಾನಗಳಲ್ಲಿಯೇ ಬಂದರೂ ಇಲ್ಲಿ ಜೈನ ಬಸದಿಗಳು ನಿರ್ಮಾಣವಾಗಿರುವುದಕ್ಕೆ ದೊರೆಯುವ ಪ್ರಾಚೀನ ದಾಖಲೆಗಳಿಲ್ಲ. ಪ್ರಸ್ತುತ ದೊರೆತಿರುವ ಆಧಾರಗಳೆಲ್ಲವೂ ಕ್ರಿ.ಶ.6ನೆಯ ಶತಮಾನದ ನಂತರದ ಕಾಲಘಟ್ಟದಾಗಿವೆ. ಅಂದರೆ ಕ್ರಿ.ಶ.6ನೆಯ ಶತಮಾನಕ್ಕಿಂತಲೂ ಹಿಂದೆ ಬಸದಿಗಳು ನಿರ್ಮಿತವಾಗಿದ್ದರೂ, ನಮಗೆ ಅವುಗಳ ಬಗೆಗೆ ಖಚಿತವಾದ ದಾಖಲೆಗಳು ದೊರೆತರೂ ಕರ್ನಾಟಕದಲ್ಲಿ ದೊರೆಯುವ ಅತ್ಯಂತ ಪ್ರಾಚೀನವಾದ ಬಸದಿಯೆಂದರೆ ಕ್ರಿ.ಶ.

---

[1].ಪ್ರಾಧ್ಯಾಪಕರು, ಪ್ರಾಚೀನ ಇತಿಹಾಸ ಮತ್ತು ಪುರಾತತ್ವ/ಪುರಾತತ್ವಶಾಸ್ತ್ರ ಮತ್ತು ವಸ್ತುಸಂಗ್ರಹಾಲಯ ವಿಭಾಗ
ಮಹಾರಾಜ ಕಾಲೇಜು ಮೈಸೂರು

634ರ ಐಹೊಳೆಯ ಮೇಗುತಿ ಜಿನಾಲಯ. ಇಮ್ಮಡಿ ಪುಲಕೇಶಿಯ ಆಶ್ರಿತನಾದ ರವಿಕೀರ್ತಿಯಿಂದ ನಿರ್ಮಿತವಾದ ಈ ಜಿನಾಲಯ ಇಂದಿಗೂ ತನ್ನ ಮೂಲ ಸ್ವರೂಪವನ್ನು ಉಳಿಸಿಕೊಂಡಿದೆ. ಇಂತಹ ಜೈನರ ಪೂಜನೀಯ ಸ್ಥಳವನ್ನು ಬಸದಿ ಎಂದು ಕರೆಯುತ್ತಾರೆ.

ಜೈನಧರ್ಮವು ಉತ್ತರ ಭಾರತದಿಂದ ಕರ್ನಾಟಕಕ್ಕೆ ಕ್ರಿಸ್ತಪೂರ್ವದಲ್ಲಿಯೇ ಬಂದು ಒಂದು ಹೊಸ ಪಂಥವನ್ನು ನಿರ್ಮಿಸಿ ಒಂದು ಸಾವಿರ ವರ್ಷಗಳವರೆಗೆ ಪ್ರಬಲ ಪಂಥವಾಗಿ ಬೆಳೆಯಿತು. ಈ ಸಮಯದಲ್ಲಿ ದಕ್ಷಿಣ ಬಿಹಾರಿನಲ್ಲಿ ಭೀಕರ ಕ್ಷಾಮವು 12 ವರ್ಷಗಳ ದೀರ್ಘಕಾಲ ಬಂದಾಗ ಭದ್ರಬಾಹು ಎಂಬ ಜೈನಗುರುವಿನೊಡನೆ ಮೌರ್ಯ ಚಕ್ರವರ್ತಿ ಚಂದ್ರಗುಪ್ತ ಮೌರ್ಯ ಮತ್ತಿತರ ಅನೇಕ ಜೈನರೊಂದಿಗೆ ದಕ್ಷಿಣ ಭಾರತದ ಶ್ರವಣಬೆಳಗೊಳಕ್ಕೆ ವಲಸೆ ಬಂದರು. ಕಾಲಾನಂತರದಲ್ಲಿ ಜೈನರಲ್ಲಿ ದಿಗಂಬರ ಮತ್ತು ಶ್ವೇತಾಂಬರ ಎಂಬ ಎರಡು ಪಂಥಗಳು ಹುಟ್ಟಿಕೊಂಡವು. ದಿಗಂಬರ ಸಂಪ್ರದಾಯವನ್ನು ಒಪ್ಪಿಕೊಂಡಂತಹ ಜೈನರು ಮಗಧದಲ್ಲಿ ಉಂಟಾದ ಭೀಕರ ಕ್ಷಾಮದ ಪರಿಣಾಮವಾಗಿ ದಕ್ಷಿಣ ಭಾರತದಲ್ಲಿ ಆಶ್ರಯ ಪಡೆಯಲು ಜೈನಮುನಿ ಭದ್ರಬಾಹು ತನ್ನ ರಾಜಶಿಷ್ಯ ಚಂದ್ರಗುಪ್ತಮೌರ್ಯ ಮತ್ತಿತರ ಅಪಾರ ಶಿಷ್ಯವರ್ಗದವರೊಡನೆ ವಲಸೆ ಹೊರಟರು. ಇವರ ಫಲವಾಗಿ ದಿಗಂಬರ ಸಮುದಾಯುವು ಮೈಸೂರು ಪ್ರಾಂತ್ಯದಲ್ಲಿ ಬೇರೂರಿ ಶ್ರವಣಬೆಳಗೊಳವನ್ನು ತಮ್ಮ ಕೇಂದ್ರ ಸ್ಥಾನವಾನ್ನಾಗಿ ಮಾಡಿಕೊಂಡಿತು.

ಈ ಹಿನ್ನೆಲೆಯಲ್ಲಿ ಕ್ರಿ.ಪೂ. 1ನೇ ಶತಮಾನದಿಂದ ಹತ್ತನೇ ಶತಮಾನದವರೆಗೂ ದೇಶದ ನಾನಾ ಜೈನಯತಿಗಳ ವಾಸಕ್ಕಾಗಿಯೋ, ಜಿನ ಮಂದಿರಗಳಿಗಾಗಿಯೋ, ಗುಹೆಗಳನ್ನು ಕೊರೆಯಿಸಿದರು. ಈ ಗುಹಾವಾಸ್ತುವೀಗ ಸ್ವಾಭಾವಿಕ ಗುಹೆಗಳನ್ನಾಗಿ ಮಾರ್ಪಡಿಸಿರುವುದನ್ನು ಕಾಣಬಹುದು. ಕರ್ನಾಟಕದಲ್ಲಿ ಜೈನರ ವಾಸ್ತುಶಿಲ್ಪಗಳು ದೊರೆಯುವುದು ಕ್ರಿ.ಶ.6ನೇ ಶತಮಾನದಿಂದೀಚೆಗೆ. ಬಾದಾಮಿ ಚಾಲುಕ್ಯರ ಮತ್ತು ರಾಷ್ಟ್ರಕೂಟರ ಕಾಲದಲ್ಲಿ ಕೆಲವು ಜೈನ ಗುಹೆಗಳನ್ನು ಕಂಡರಿಸಿರುವುದುಂಟು. ಇದಕ್ಕೆ ಸಾಕ್ಷಿಯಾಗಿ ಕ್ರಿ.ಶ. ಸುಮಾರು 7ನೇ ಶತಮಾನದಲ್ಲಿ ಕೊರೆಯಿಸಿರುವ ನಾಲ್ಕು ಗುಹಾಂತರ ದೇವಾಲಯಗಳಲ್ಲಿ ಒಂದು ಜೈನ, ಐಹೊಳೆಯಲ್ಲಿರುವ ಮೇಣ ಬಸದಿ, 8ನೇ ಶತಮಾನಕ್ಕೆ ಸೇರಿದ ಜೈನ ಗುಹಾಂತರ ದೇವಾಲಯ, ಎಲ್ಲೋರಾದಲ್ಲಿ ಬೌದ್ಧ, ವೈದಿಕ ಗುಹೆಗಳಿದ್ದು, ತದನಂತರದಲ್ಲಿ ಒಂದು ಸಾಲು ಜೈನ ಗುಹೆಗಳಿವೆ. ಕ್ರಿ.ಶ. 8 ಮತ್ತು 9ನೇ ಶತಮಾನಗಳಿಗೆ ಸೇರುವ ಈ ಗುಹೆಗಳಲ್ಲಿ ಇಂದ್ರಗುಹೆ ಮತ್ತು ಜಗನ್ನಾಥ ಗುಹೆಗಳು ಜೈನ ಗುಹೆಗಳಲ್ಲೆಲ್ಲಾ ವಿಸ್ತಾರವಾಗಿದ್ದು, ಇವುಗಳಲ್ಲಿರುವ ಶಿಲ್ಪಗಳು ಸಂಪೂರ್ಣವಾಗಿ ಕಂಡರಿಸಿದಂತವುಗಳಾಗಿವೆ.

ಜೈನ ಪರಂಪರೆಯ ಸಾಂಸ್ಕೃತಿಕ ಬದುಕಿನ ಹಿನ್ನೆಲೆಯಲ್ಲಿ ಅಧ್ಯಯನ ಮಾಡಿದಾಗ ಬಸದಿಯ ಮುಂದೆ ಬಹು ಚಿಕ್ಕ ಮಂಟಪದ ಮೇಲಿರುವ ದೊಡ್ಡದಾದ ಕಂಬಕ್ಕೆ ಮಾನಸ್ತಂಭವೆಂದೂ, ಬೃಹತ್ ವಿಗ್ರಹಗಳ ಮುಂದಿನ ಸರಳ ಸ್ತಂಭಗಳಿಗೆ ಬ್ರಹ್ಮಸ್ತಂಭಗಳೆಂದು ಕರೆಯುತ್ತೇವೆ. ಗುಹೆಗಳನ್ನು

ಕೊರೆದಿರುವಂತೆ ಬಂಡೆಗಳಲ್ಲೇ ರಚಿಸಿರುವ ಜೈನಾಲಯಗಳುಂಟು. ಐಹೊಳೆಯಲ್ಲಿ ಮೇಗುತಿಯ ಗುಡ್ಡದ ಪಶ್ಚಿಮ ಇಳಿಜಾರಿನಲ್ಲಿ ಕ್ರಿ.ಶ.7ನೆಯ ಶತಮಾನದಲ್ಲಿ ಬಂಡೆಯೊಂದನ್ನು ಕತ್ತರಿಸಿ ನಿರ್ಮಿಸಿದ ಚಿಕ್ಕದೊಂದು ದೇವಾಲಯವಿದ್ದು, ಅದಕ್ಕೆ ಗರ್ಭಗೃಹ ಮತ್ತು ಮಂಟಪಗಳಿವೆ. ಈ ರೀತಿಯಲ್ಲಿ ಶಿಲಾ ನಿರ್ಮಿತ ಜಿನಮಂದಿರಗಳು 6 ಮತ್ತು 7ನೆಯ ಶತಮಾನಗಳಲ್ಲಿ ಆರಂಭಗೊಂಡು ದೇಶದ ನಾನಾ ಭಾಗಗಳಲ್ಲಿ ಕಾಲಕ್ರಮೇಣ ಶೈವ, ವೈಷ್ಣವ ದೇವಾಲಯಗಳಂತೆ ವಿಧ ವಿಧವಾಗಿ ಬೆಳೆದು ಬಂದಿದೆ. ಕರ್ನಾಟಕದಲ್ಲಿ ಬಾದಾಮಿ ಚಾಲುಕ್ಯರ ನಂತರದಲ್ಲಿ ತಲಕಾಡಿನ ಗಂಗರು, ರಾಷ್ಟ್ರಕೂಟರು, ಕಲ್ಯಾಣಿ ಚಾಲುಕ್ಯರು, ಹೊಯ್ಸಳರು, ವಿಜಯನಗರದ ಅರಸರು ಮುಂತಾದ ರಾಜಮನೆತನಗಳ ಆಡಳಿತ ಕಾಲದಲ್ಲಿಯೂ ನಿರ್ಮಾಣವಾದ ಜೈನ ಬಸದಿಗಳನ್ನು ಕಾಣಬಹುದು. ಆದರೆ ದಕ್ಷಿಣ ಕರ್ನಾಟಕದ ಪ್ರಾಂತ್ಯಗಳಲ್ಲಿ ಗಂಗರ ಕಾಲದಲ್ಲಿ ಜೈನ ವಾಸ್ತುಶಿಲ್ಪ ವಿಫುಲವಾಗಿ ಬೆಳೆಯಿತು. ಇದಕ್ಕೆ ಸಾಕ್ಷಿಯಾಗಿ ಶ್ರವಣಬೆಳಗೊಳದಲ್ಲಿರುವ ಗೊಮ್ಮಟೇಶ್ವರ ಮೂರ್ತಿ ಮತ್ತು ಇನ್ನಿತರ ಬಸದಿಗಳು. ಇದನ್ನೇ ಅನುಸರಿಸುತ್ತಾ ಹೊಯ್ಸಳರು ಮತ್ತು ವಿಜಯನಗರದ ಅರಸರು ಹಲವು ಬಸದಿಗಳನ್ನು ನಿರ್ಮಾಣ ಮಾಡಿದರು.

ಜೈನಧರ್ಮವು ತನ್ನ ಆಚಾರ ವಿಚಾರಗಳಲ್ಲಿ ಸ್ವಲ್ಪ ಮಟ್ಟಿಗೆ ಬದಲಾವಣೆಗೊಳಪಟ್ಟಿತು. ಆದರೆ ಮೂರ್ತಿಶಿಲ್ಪದ ದೃಷ್ಟಿಯಲ್ಲಿ ಇದು ಜಡವಾಗಿತ್ತು. ಪ್ರಾರಂಭದ ಮೂರ್ತಿಶಿಲ್ಪಗಳು ತಮ್ಮ ಭಾವಭಂಗಿಯನ್ನು, ಸರಳವಾಗಿಯೇ ಮುಂದುವರೆಸಿದವು. ಅಂದರೆ ಪದ್ಮಾಸನಭಂಗಿ, ಧ್ಯಾನಾಸಕ್ತನಾಗಿ ಸಮಭಂಗಿಯಲ್ಲಿ ನಿಂತಿರುವ ಮೂರ್ತಿಯ ರೂಪಗಳೇ ಅತಿ ಹೆಚ್ಚಾಗಿ ಕಾಣಬರುತ್ತವೆ. ಈ ದೃಷ್ಟಿಯಿಂದ ನಿರಾಭರಣ ಮುಖ್ಯ ಲಕ್ಷಣ, ರೂಪ, ಮೈಕಟ್ಟು ಹೋಲಿಕೆಗಳಲ್ಲಿ ಹಲವು ಮೂರ್ತಿಗಳು ಸಾಮ್ಯತೆಯನ್ನು ಹೊಂದಿರುತ್ತವೆ. ಇವುಗಳನ್ನು ಗುರುತಿಸಬೇಕಾದರೆ ಇವುಗಳ ಪೀಠದ ಕೆಳಗೆ ಇರಬಹುದಾದ ಶಾಸನ ಅಥವಾ ಲಾಂಛನಗಳಿಂದ ನಿರ್ಧರಿಸಬಹುದು. ಜೈನ ಮೂರ್ತಿಗಳು ಗಂಭೀರತೆಯನ್ನು, ಶಾಂತಚಿತ್ತತೆಯನ್ನು, ಅಶಕ್ತರನ್ನು ಅನುಗ್ರಹಿಸುವ ಭಾವನೆಯನ್ನು ವ್ಯಕ್ತಪಡಿಸುತ್ತವೆ. ಆದರೆ ಜೈನ ಮಂದಿರಗಳು ಅಲಂಕಾರಕ್ಕೆ ಒಳಗಾಗಿ ಆಕರ್ಷಣೆಯನ್ನು ಹೊಂದಿರುವುದನ್ನು ಕಾಣಬಹುದು.

ಈ ಹಿನ್ನೆಲೆಯಲ್ಲಿ ಕಡೂರು ತಾಲ್ಲೂಕಿನಲ್ಲಿ ಕಂಡು ಬರುವ ಜೈನ ಬಸದಿಗಳ ಬಗ್ಗೆ ಕೆಳಕಂಡಂತೆ ಅಧ್ಯಯನ ಮಾಡಲಾಗಿದೆ.

**ಹುಲಿಕಲ್ (ಜೈನ ಶಿಲ್ಪಗಳು):** ಈ ಗ್ರಾಮ ಕಡೂರು ತಾಲ್ಲೂಕಿನ ತಂಗಲಿಯಿಂದ ಪೂರ್ವಕ್ಕೆ ಸು.2 ಕಿ.ಮೀ. ದೂರದಲ್ಲಿದ್ದು ಇಲ್ಲಿ ದೊಡ್ಡ ಬಂಡೆಕಲ್ಲಿನ ಸಮೂಹವಿರುವುದರಿಂದ ಇದನ್ನು ಹುಲಿಕಲ್ಲು ಎಂದು ಕರೆಯಲಾಗುತ್ತದೆ. ಇಲ್ಲಿಯ ವಾಯವ್ಯ ಭಾಗದಲ್ಲಿ ಎರಡು ಸಾಲು ಶಿಲ್ಪಗಳಿದ್ದು ಅದರಲ್ಲಿ ಐದು ಜೈನ ಮುನಿಗಳ ಶಿಲ್ಪಗಳಿದ್ದು ಇವುಗಳು ಅಸ್ಪಷ್ಟವಾಗಿವೆ. ಈ ಶಿಲ್ಪಗಳ ಕೆಳಭಾಗದಲ್ಲಿ ಮುನಿಗಳ ಹೆಸರುಗಳನ್ನು ಕನ್ನಡದಲ್ಲಿ ಕೆತ್ತಲಾಗಿದೆ. ಇವುಗಳನ್ನು ಗಮನಿಸಿದರೆ ಕ್ರಿ.ಶ.15 ಮತ್ತು 16ನೆಯ ಶತಮಾನದ ಕಾಲದ್ದಾಗಿದೆ.

“ನೇಮಣ್ಣಗಳು, ರಾಕಣ್ಣಗಳು, ವಿನಯಭಟ್ಟಾರಕರು, ಅರೆಯಸೇನಭಟ್ಟಾರಕರು, ಅಜಿತ ಸೇನಾಭಟ್ಟಾರಕರು, ಪ್ರಭಾಚಂದ್ರದೇವರು . . . . . . . . . (ಈ ಭಾಗದಲ್ಲಿ ಅಕ್ಷರಗಳು ಅಳಿಸಿಹೋಗಿವೆ) ದೇವರು ಮತ್ತು ಗುಣಕೀರ್ತಿದೇವರು ಎಂಬ ಹೆಸರುಗಳನ್ನು ಕೆತ್ತಲಾಗಿದೆ.

**ಕೆರೆಸಂತೆಯ ಪಾರ್ಶ್ವನಾಥ ಬಸದಿ:**

ಕೆರೆಸಂತೆಯ ಜನಾರ್ಧನ ದೇವಾಲಯದ ದಕ್ಷಿಣ ಭಾಗದಲ್ಲಿ ಪಾರ್ಶ್ವನಾಥ ಬಸದಿಯಿದೆ. ಕ್ರಿ.ಶ.12–13ನೆಯ ಶತಮಾನದ ಶಾಸನದಲ್ಲಿ ಹೊಯ್ಸಳರ ರಾಜ ನರಸಿಂಹನು ಕೆರೆಸಂತೆಯ ಪಾರ್ಶ್ವನಾಥ ಬಸದಿಗೆ ಭೂಮಿಯನ್ನು ದಾನ ನೀಡಿದ ಉಲ್ಲೇಖವಿದೆ. ಪ್ರಸ್ತುತ ಬಸದಿ ಶಿಥಿಲವಾಗಿದ್ದು ಇದರ ಮಧ್ಯಭಾಗದಲ್ಲಿ ಹುತ್ತವೊಂದು ಬೆಳೆದಿದೆ. ಇಲ್ಲಿ ಯಾವುದೇ ಶಿಲ್ಪಗಳಿಲ್ಲ ಕಲ್ಲುಚಪ್ಪಡಿ ಭಗ್ನವಾದ ಕಂಬಗಳು ಹಾಗೂ ಇನ್ನಿತರ ಅವಶೇಷಗಳಿವೆ. ಬಸದಿಯ ಸುತ್ತಲೂ ಗಿಡಗಂಟಿಗಳು ಬೆಳೆದಿದ್ದು ಒಳಪ್ರವೇಶಿಸಲೂ ಸಾಧ್ಯವಾಗದ ರೀತಿಯಲ್ಲಿದೆ.

**ಸಿಂದಗೆರೆಯ ಪಾರ್ಶ್ವನಾಥ ಬಸದಿ:**

ಸಿಂದಗೆರೆಯು ಚಿಕ್ಕಮಗಳೂರಿನಿಂದ ಪೂರ್ವಕ್ಕೆ ಸು. 32 ಕಿ.ಮೀ. ದೂರದಲ್ಲಿದ್ದು ಸಿಂದಮ್ಮ ಎಂಬ ಜೈನ ಮಹಿಳೆಯು ಬಸದಿಯೊಂದನ್ನು ಕಟ್ಟಿಸಿದುದರಿಂದ ಈ ಗ್ರಾಮಕ್ಕೆ ಸಿಂದಗೆರೆ ಎಂದು ಹೆಸರು ಬಂದಿತೆಂದು ಪ್ರತೀತಿ. ಆದರೆ ಶಾಸನದ ಪ್ರಕಾರ ಈಗಿರುವ ಪಾರ್ಶ್ವನಾಥ ಬಸದಿಯನ್ನು ಕ್ರಿ.ಶ. 1137ರಲ್ಲಿ ವಿಷ್ಣುವರ್ಧನನ ದಂಡನಾಯಕ ಹಾಗೂ ಮಂತ್ರಿಯಾಗಿದ್ದ ಮರಿಯಾನೆ ಕಟ್ಟಿಸಿದನು. ಬಸದಿಯು ಪೂರ್ವಾಭಿಮುಖವಾಗಿದ್ದು ಚತುರ್ರಸ ತಳವಿನ್ಯಾಸವನ್ನು ಹೊಂದಿದ್ದು ಸಾಮಾನ್ಯವಾದ ಅಧಿಷ್ಠಾನದ ಮೇಲೆ ಕಟ್ಟಲಾಗಿದೆ. ಅಧಿಷ್ಠಾನದಲ್ಲಿ ಉಪಾನ, ಜಗತಿ, ಚೂಪಾದ ತ್ರಿಪಟ್ಟ ಕುಮುದ ಮತ್ತು ಚಿಕ್ಕದಾದ ದಂತಪಂಕ್ತಿಯಿದ್ದು ಬಸದಿಯನ್ನು ಸೋಪುಗಲ್ಲಿನಿಂದ ನಿರ್ಮಿಸಲಾಗಿದ್ದು ಗರ್ಭಗೃಹ, ತೆರೆದ ಸುಖನಾಸಿ, ನವರಂಗ ಮತ್ತು ಸಣ್ಣದಾದ ಮುಖಮಂಟಪವನ್ನು ಹೊಂದಿದೆ.

ಗರ್ಭಗೃಹದಲ್ಲಿ ಸು.5 ಅಡಿ ಎತ್ತರದ ಪಾರ್ಶ್ವನಾಥನ ವಿಗ್ರಹವಿದೆ. ತಲೆಯ ಮೇಲೆ ಸುರುಳಿಯಾಕಾರದ ಐದು ಹೆಡೆಗಳ ಸರ್ಪವಿದ್ದು ಅದರ ಮೇಲೆ ಛತ್ರಿಯನ್ನು ಬಿಡಿಸಲಾಗಿದೆ. ಗರ್ಭಗುಡಿಯ ಬಾಗಿಲುವಾಡಗಳಲ್ಲಿ ಸಾಮಾನ್ಯ ಅಲಂಕರಣೆಯಿದೆ ಲಲಾಟಬಿಂಬದಲ್ಲಿ ಜಿನಬಿಂಬವಿದೆ. ಇದರ ಮೇಲ್ಭಾಗದಲ್ಲಿ ಸಣ್ಣ ಸಣ್ಣ ಬುರುಜುಗಳಿಂದ ಅಲಂಕರಿಸಲಾಗಿದೆ. ಅನಂತರದಲ್ಲಿ ತೆರೆದ ಸುಕನಾಸಿಯಿದ್ದು ಇಲ್ಲಿ ಧರಣೇಂದ್ರ ಯಕ್ಷ ಮತ್ತು ಚಕ್ರೇಶ್ವರಿ ಯಕ್ಷಿಯ ವಿಗ್ರಹಗಳಿದ್ದು ಇವು ಹೊಯ್ಸಳರ ಕಾಲದ್ದಾಗಿವೆ. ನವರಂಗ ಒಂಬತ್ತು ಅಂಕಣವನ್ನು ಹೊಂದಿದ್ದು ಇಲ್ಲಿ ನಾಲ್ಕು ಹೊಯ್ಸಳ ಮಾದರಿಯ ದುಂಡಗೆ ಕಡೆದಿರುವ ಕಂಬಗಳಿವೆ. ಇವುಗಳ ಪೀಠ ಚೌಕಾಕಾರವಾಗಿದ್ದು ಕಾಂಡದ ಭಾಗದ ದಿಂಡು ಗಾಡಿ, ಗಂಟೆ, ಗಾಲಿಯಾಕಾರವಾಗಿರುವಂತೆ ಕೆತ್ತನೆ ಮಾಡಲಾಗಿದ್ದು ಬೋದಿಗೆಯ ಚಾಚುಪೀಠಗಳನ್ನು

ಇಲ್ಲಿ ಶಾಸ್ತ್ರೋಕ್ತವಾಗಿ ಕಂಡರಿಸಲಾಗಿದೆ. ನವರಂಗದ ಮಧ್ಯದಂಕಣದ ಭುವನೇಶ್ವರಿಯಲ್ಲಿ ಪದ್ಮಗಳ ಉಬ್ಬು ಕೆತ್ತನೆಯಿದೆ. ಈ ದ್ವಾರದ ಲಲಾಟಬಿಂಬದಲ್ಲಿ ಧ್ಯಾನಮುದ್ರೆಯಲ್ಲಿ ಕುಳಿತಿರುವ ಜಿನಬಿಂಬ ಹಾಗೂ ಇಳಿಬಿಟ್ಟ ಗುಬುಟುಗಳನ್ನು ಕೆತ್ತಲಾಗಿದೆ. ಮೇಲ್ಭಾಗದಲ್ಲಿ ಸಣ್ಣ ಸಣ್ಣ ಬುರುಜುಗಳಿಂದ ಅಲಂಕರಿಸಲಾಗಿದ್ದು ನವರಂಗದ ಮುಂಭಾಗದಲ್ಲಿ ತೆರೆದ ಮುಖಮಂಟಪವಿದ್ದು ಹೆಚ್ಚಿನ ಅಲಂಕರಣೆಯಿಲ್ಲ. ಇಲ್ಲೂ ಹೊಯ್ಸಳ ಮಾದರಿಯ ಎರಡು ಕಂಬಗಳಿವೆ. ಇದರ ಭುವನೇಶ್ವರಿಯಲ್ಲಿ ಧ್ಯಾನಾಸಕ್ತನಾಗಿ ಕುಳಿತಿರುವ ಜಿನನ ಶಿಲ್ಪವಿದ್ದು ಸುತ್ತಲೂ ಸಣ್ಣ ಗುಬುಟುಗಳು ಹಾಗೂ ಸುರುಳಿಯಾಕಾರದ ಲತಾಬಳ್ಳಿಯ ಅಲಂಕರಣೆಯಿದೆ. ನವರಂಗದ ಬಲಭಾಗದಲ್ಲಿ ಎರಡೂ ಅಂಕಣಕ್ಕೆ ಹೊಂದಿಕೊಂಡಂತೆ ಇತ್ತೀಚೆಗೆ ಗೋಡೆಯನ್ನು ನಿರ್ಮಿಸಿದ್ದಾರೆ. ಇಲ್ಲಿ ಭಿತ್ತಿಗೆ ಹೊಂದಿಕೊಂಡಂತೆ ಅಸ್ಪಷ್ಟವಾದ ಶಿಲ್ಪಗಳನ್ನು ಕೆತ್ತಲಾಗಿದೆ ಇವುಗಳನ್ನು ಯಕ್ಷ ಮತ್ತು ಯಕ್ಷಿ ಎಂದು ಪೂಜಿಸುತ್ತಿದ್ದಾರೆ. ಇಲ್ಲಿಯ ಶಿಲ್ಪಗಳು ಗುರುತಿಸಲಾಗದಷ್ಟು ಅಸ್ಪಷ್ಟವಾಗಿವೆ. ಈ ದ್ವಾರದ ಇಕ್ಕೆಲಗಳಲ್ಲಿ ಶಂಖ, ಚಕ್ರ, ಅಂಕುಶ, ಗದೆಯನ್ನು ಹಿಡಿದಿರುವ ದ್ವಾರಪಾಲಕರ ಶಿಲ್ಪಗಳಿವೆ.

ಹೊರಭಿತ್ತಿಯು ಅರೆಕಂಬಗಳಿಂದ ಅಲಂಕೃತವಾಗಿದ್ದು ಸಾಧಾರಣವಾದ ಅಲಂಕರಣವನ್ನು ಹೊಂದಿದೆ ಗರ್ಭಗೃಹದ ಮೇಲ್ಭಾಗದಲ್ಲಿ ಇಟ್ಟಿಗೆ ಮತ್ತು ಗಾರೆಯಿಂದ ನಿರ್ಮಿಸಿರುವ ದ್ರಾವಿಡ ಮಾದರಿಯ ಶಿಖರವಿದೆ  ಇದನ್ನು ಇತ್ತೀಚೆಗೆ ನಿರ್ಮಿಸಲಾಗಿದೆ ಬಸದಿಯು ಏರು ವಿನ್ಯಾಸದಲ್ಲಿ ಅಧಿಷ್ಠಾನ, ಭಿತ್ತಿ, ಕಪೋತ ಎಲ್ಲವೂ ಮೂಲ ವಾಸ್ತುವಿನದ್ದಾಗಿವೆ ಬಸದಿಯ ಬಹಳಷ್ಟು ಭಾಗಗಳು ಇತ್ತೀಚೆಗೆ ದುರಸ್ತಿಯಾಗಿವೆ.

**ಇನ್ನಿತರ ಶಾಸನೋಕ್ತ ಭಗ್ನ ಬಸದಿಗಳು:**

**ಕಳಸಾಪುರ:** ಕಡೂರು ತಾಲ್ಲೂಕಿನ ಕಳಸಾಪುರ ಎಂಬಲ್ಲಿ ಕ್ರಿ.ಶ.1176ರಲ್ಲಿ ಎರಡನೆಯ ಬಲ್ಲಾಳನು ಬಸದಿಯನ್ನು ಕಟ್ಟಿಸಿ ಶಾಂತಿನಾಥನ ಪ್ರತಿಮೆಯನ್ನು ಪ್ರತಿಷ್ಠೆ ಮಾಡಿಸಿದ. ಈ ಬಸದಿಗೆ ವೀರಬಲ್ಲಾಳ ಜಿನಾಲಯ ಎಂದೂ ಕರೆಯಲಾಗಿತ್ತು ಪ್ರಸ್ತುತ ಈ ಗ್ರಾಮದಲ್ಲಿ ಯಾವುದೇ ಬಸದಿಯಿಲ್ಲ.

**ಕನಕನಕೆರೆ:** ಕಡೂರು ತಾಲ್ಲೂಕಿನ ಕನಕನಕೆರೆಯಲ್ಲಿ ಕ್ರಿ.ಶ.10–11ನೆಯ ಶತಮಾನದಲ್ಲಿ ಕೊಂಣ್ಡಯ್ಯಸೆಟ್ಟಿ ಎಂಬುವವನು ಮೂಲಸ್ಥಾನ ಬಸದಿಯನ್ನು ಕಟ್ಟಿಸಿದನು ಪ್ರಸ್ತುತ ಈ ಗ್ರಾಮದಲ್ಲಿ ಬಸದಿಯಿಲ್ಲ.

**ಕಬ್ಬಳ್ಳಿ:** ಕಡೂರು ತಾಲ್ಲೂಕಿನ ಕಬ್ಬಳ್ಳಿಯಲ್ಲಿ ಕ್ರಿ.ಶ.1159ರಲ್ಲಿ ಹೊಯ್ಸಳಗಾವುಂಡನು ತನ್ನ ತಾಯಿ ಚಿತ್ತವೆಗಾವುಂಡಿಯ ಪರೋಕ್ಷ ವಿನಯಕ್ಕಾಗಿ ಬಸದಿಯನ್ನು ಕಟ್ಟಿಸಿ ಭೂಮಿಯನ್ನು ದಾನ ನೀಡಿದನು. ಕೆಲವು ಭೂಮಿಕಾಣಿಕೆಗಳನ್ನು ವಿಂಗಡಿಸಿ ಬಸದಿಗೂ, ದೇವಾಲಯಕ್ಕೂ ಹಂಚಿದನು. ಪ್ರಸ್ತುತ ಈ ಗ್ರಾಮದಲ್ಲಿ ಯಾವ ಬಸದಿಯು ಇಲ್ಲ. ಜಿನ ಶಾಸನವೊಂದು ಗ್ರಾಮದ ಮಲ್ಲಿಕಾರ್ಜುನ ದೇವಾಲಯದ ಮುಂಭಾಗದ ಬಯಲಿನಲ್ಲಿದೆ. ಶಾಸನದ ಮೇಲ್ಭಾಗದಲ್ಲಿ ಪಾರ್ಶ್ವನಾಥನ ಶಿಲ್ಪವನ್ನು ಕೆತ್ತಲಾಗಿದ್ದು ಅಕ್ಕಪಕ್ಕದಲ್ಲಿ ಚಾಮರಧಾರಿಣಿಯರನ್ನು ಕೆತ್ತಲಾಗಿದೆ.

**ಮಲ್ಲೇಶ್ವರ:** ಕಡೂರಿನಿಂದ ಸು. 2 ಕಿ.ಮೀ. ದೂರದಲ್ಲಿರುವ ಈ ಗ್ರಾಮದಲ್ಲಿ ಕ್ರಿ.ಶ. 10ನೆಯ ಶತಮಾನದಲ್ಲಿ ಚಾವುಂಡನಾಯಕನು 5 ಖಂಡುಗದ ಭೂಮಿಯನ್ನು ಬಸದಿಗೆ ದಾನವನ್ನಾಗಿ ನೀಡಿದ ಉಲ್ಲೇಖವಿದೆ. ಆದರೆ ಈಗ ಈ ಗ್ರಾಮದಲ್ಲಿ ಯಾವುದೇ ಬಸದಿಯಾಗಲೀ ಯಾವುದೇ ಜಿನಶಿಲ್ಪಗಳಾಗಲೀ ಕಂಡುಬರುವುದಿಲ್ಲ.

**ಸಕ್ಕರೆ ಪಟ್ಟಣದ ಪಾರ್ಶ್ವನಾಥ ಬಸದಿ:** ಇಲ್ಲಿರುವ ಪಾರ್ಶ್ವನಾಥ ಬಸದಿ ಸಂಪೂರ್ಣವಾಗಿ ನಾಶವಾಗಿದೆ. ಪ್ರಸ್ತುತ ಗ್ರಾಮದ ಸರ್ಕಾರಿ ಆಸ್ಪತ್ರೆಯ ಆವರಣದಲ್ಲಿ 5 ಅಡಿ ಎತ್ತರದ ಸೋಪುಗಲ್ಲಿನಲ್ಲಿ ಮಾಡಿರುವ ಪಾರ್ಶ್ವನಾಥನ ವಿಗ್ರಹವಿದೆ.ಇದರಲ್ಲಿ ಅಲಂಕೃತ ಪ್ರಭಾವಳಿ ಇದೆ ಈ ಗ್ರಾಮದಲ್ಲಿ ಜೈನ ಉಪಾಸಕರ ಹೆಸರಿರುವ ಮೂರು ಶಾಸನಗಳಿವೆ. ಇವುಗಳು 13–14ನೆಯ ಶತಮಾನದವು. ಆದರೆ ಯಾವುದರಲ್ಲಿಯೂ ಬಸದಿ ಕಟ್ಟಿದ ಉಲ್ಲೇಖವಿಲ್ಲ. ಗ್ರಾಮದಲ್ಲಿ ಪಾರ್ಶ್ವನಾಥ ವಿಗ್ರಹ ಮಾತ್ರವಿದೆ.

ಒಟ್ಟಾರೆ ಮೇಲೆ ತಿಳಿಸಿದ ಎಲ್ಲಾ ಜೈನ ಬಸದಿಗಳು ಕಡೂರು ತಾಲ್ಲೂಕಿನಲ್ಲಿ ಧಾರ್ಮಿಕ ಪ್ರಭುತ್ವ ಸಾಧಿಸುವಲ್ಲಿ ಯಶಸ್ವಿಯಾಗಿವೆ ಎನ್ನಬಹುದು.

## ಪರಾಮರ್ಶನ ಗ್ರಂಥಗಳು

1. ಚಿದಾನಂದಮೂರ್ತಿ.ಎಂ – ಕ.ಶಾ.ಸಾಂ.ಅ., 2008
2. ಪರ್ಸಿಬ್ರೌನ್ – ಇಂಡಿಯನ್ ಆರ್ಕಿಟೆಕ್ಚರ್, ಬಾಂಬೆ, 1942
3. ಕನ್ನಡ ವಿಷಯ ವಿಶ್ವಕೋಶ, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, 2005,
4. ಆಚಾರ್ಯ, ಪಿ.ಕೆ. – ಎ ಡಿಕ್ಷನರಿ ಆಫ್ ಹಿಂದೂ ಆರ್ಕಿಟೆಕ್ಚರ್
5. ದಿವಾಕರ–ಆರ್.ಆರ್. – ಕರ್ನಾಟಕದ ಪರಂಪರೆ, ಸಂ–1, 1968
6. ಹಾ.ಮಾ.ನಾಯಕ– ಕನ್ನಡ ವಿಷಯ ವಿಶ್ವಕೋಶ–ಸಂ–8 1979
7. ರೈಸ್.ಬಿ.ಎಲ್. – ಮೈಸೂರು ಅಂಡ್ ಕೂರ್ಗ್ ಫ್ರಮ್ ದ ಇನ್ಸ್ಕ್ರಿಪ್ಷನ್ಸ್–1909
8. ಗೋಪಾಲ್, ಆರ್, – ವಿಜಯನಗರ ಅಧ್ಯಯನ, ಸಂಪುಟ–10
9. ಪರ್ಸಿಬ್ರೌನ್, ಪೂರ್ವೋಕ್ತ
10. ಮಿರ್ಜಿ ಅಣ್ಣಾರಾಯ.– ಜೈನ ಧರ್ಮ
11. ಎಂ.ಎ.ಆರ್ ., 1942
12. ಎಂ.ಎ.ಆರ್., 1945
13. ಚಿಕ್ಕಮಗಳೂರು ಜಿಲ್ಲಾ ಗೆಜೆಟಿಯರ್
14. ಎ.ಕ.ಸಂ. – 11, ಶಾಸನ ಸಂಖ್ಯೆ – 211, ಪು.ಸಂ. 136 – 41

15. ಜಯಪ್ಪಗೌಡ – ಭೈರವ ಬಾಗಿನ, ಪು.ಸಂ. 225
16. ಎ.ಕ.ಸಂ. – 11, ಶಾಸನ ಸಂಖ್ಯೆ – 218, ಪು.ಸಂ. 145
17. ಎ.ಕ.ಸಂ. – 12, ಶಾಸನ ಸಂಖ್ಯೆ – 37, ಪು.ಸಂ. 55
18. ಎ.ಕ.ಸಂ. – 12, ಶಾಸನ ಸಂಖ್ಯೆ – 43, ಪು.ಸಂ. 58–61
19. ಎ.ಕ.ಸಂ. – 12, ಶಾಸನ ಸಂಖ್ಯೆ – 181, ಪು.ಸಂ. 203
20. ಎ.ಕ.ಸಂ. – 12, ಶಾಸನ ಸಂಖ್ಯೆ – 212, 213, 214, ಪು.ಸಂ. 240–42